## ಕುಪ್ಪಳಿ - ಕವಿಮನೆ

**ರನ್ನನು ಪಂಪನು ಬಹರಿಲ್ಲಿ;**

**ಶ್ರೀ ಗುರುವಿಹನಿಲ್ಲಿ!**

**ಮಿಲ್ಟನ್, ಷೆಲ್ಲಿ ಬಹರಿಲ್ಲಿ;**

**ಕವಿವರರಿಹರಿಲ್ಲಿ!**

**ಮುದ್ದಿನ ಹಳ್ಳಿ**

**ಈ ಕುಪ್ಪಳ್ಳಿ;**

**ಬಾ, ಕಬ್ಬಿಗ ನಾನಿಹೆನಿಲ್ಲಿ!**



ನಮ್ಮ ಮನೆ (ಕುಪ್ಪಳಿ) ಮಲೆನಾಡಿನ ವನಾಲಂಕೃತ ಗಿರಿಶ್ರೇಣಿಗಳ ತೊಡೆಯ ಮೇಲೆ ಕೂತಿದೆ. ನಮ್ಮ ಮನೆಯ ಹಿತ್ತಲು ಕಡೆಯನ್ನು ನಾವು ಬೆಟ್ಟದಿಂದ ಕಡಿದು ಕಡಿದು ಯುದ್ಧ ಮಾಡಿ ಗೆದ್ದುಕೊಂಡಿದ್ದೇವೆ. ಮನೆಯಿಂದ ಪೂರ್ವದಿಕ್ಕಿಗೆ ಹತ್ತು ಮಾರು ಬೆಟ್ಟವೇರಿ ಕಾಡಿನಲ್ಲಿ ತೂರಬೇಕು. ಮನೆಗೆ ಪೂರ್ವೋತ್ತರ ದಕ್ಷಿಣ ಭಾಗಗಳಲ್ಲಿ ಭೀಮಾಕಾರದ ಪರ್ವತಶ್ರೇಣಿಗಳು ದಿಗಂತವನ್ನು ನಡುಬಾನಿಗೆತ್ತಿ ನಿಂತಿವೆ. ಪಶ್ಚಿಮ ಭಾಗದಲ್ಲಿಯೂ ಬೆಟ್ಟಗಳಿವೆ; ಆದರೆ ಒಂದು ಮೈಲಿಯಷ್ಟು ದೂರ. ನಡುವೆಯೇನೋ ಬೇಕಾದಷ್ಟು ಕಾಡುಗಳಿವೆ. ನಮ್ಮ ಮನೆಗೂ ಪೂರ್ವಾದ್ರಿಗೂ ನಡುವೆ ನಮ್ಮ ಅಡಕೆ ತೋಟದ ಒಂದು ತುದಿಸೆರಗು ಹಬ್ಬಿಕೊಂಡಿದೆ. ಆ ಸೆರಗಿನಲ್ಲಿಯೆ ನಮ್ಮ ಮನೆಯ ಕೆರೆಯಿದೆ. ಆ ಕೆರೆಗೂ ಮನೆಗೂ ಅರ್ಧ ಫರ್ಲಾಂಗು ದೂರವಿದೆ. ಕೆರೆ ಬೆಟ್ಟದ ಬುಡದಲ್ಲಿ ಅರಣ್ಯದ ಮಡಿಲಲ್ಲಿ ಮಲಗಿದೆ. ಕಾಡಿನ ಹೆಮ್ಮರಗಳು, ಪೊದೆಗಳು, ಬಿದಿರು ಮೆಳೆಗಳು ಅದರ ನೀರಿನ ಮೇಲೆ ಬಾಚಿಕೊಂಡಿವೆ. ಪ್ರಾಂತಃಕಾಲದ ತರುಣಾರುಣ ಜ್ಯೋತಿಯಲ್ಲಿ ನೋಡಿದರೆ ಮೈಮರೆಸುವಂತೆ ಮನೋಜ್ಞವಾಗಿರುವುದು.

ನಮ್ಮ ಉಪ್ಪರಿಗೆ ಪೂರ್ವದಿಕ್ಕಿಗೆ ತೆಗೆದುಕೊಂಡಿದೆ. ಉಳಿದೆಲ್ಲ ದಿಕ್ಕಿಗೂ ಗೋಡೆ ಕಿಟಕಿಗಳಿವೆ. ಅಲ್ಲಿ ಕುಳಿತು ನೋಡಿದರೆ ನಮ್ಮೆದುರಾಗಿ ಇಳಿಜಾರಾಗಿ ಮೇಲೆದ್ದಿರುವ ಅನಂತ ನಿಬಿಡಾರಣ್ಯಶ್ರೇಣಿಗಳು ಗಂಭೀರವಾಗಿ ಸುಂದರವಾಗಿ ರಂಜಿಸುವವು. ಅಲ್ಲಿ ನಮಗೆ ತಿಳಿಯುತ್ತದೆ., ಹಸುರು ಬಣ್ಣದಲ್ಲಿ ಎಷ್ಟು ಬಗೆಗಳಿರಬಹುದೆಂದು. ಆ ಗಿರಿಗಳಾಚೆಯಲ್ಲಿ ನೀಲಾಕಾಶವು ಪಾತಾಳದಲ್ಲಿ ನಿಂತು ಸ್ವರ್ಗವನ್ನು ಇಣಿಕಿ ನೋಡುವಂತೆ ಧೀರ ಗಂಭೀರವಾಗಿರುವುದು. ಆ ಗಿರಿಶಿಖರ ರೇಖೆಯಲ್ಲಿ ಇತರ ವೃಕ್ಷಗಳಿಗಿಂತ ಹಿರಿದಾಗಿ ಎತ್ತರವಾಗಿ ಬೆಳೆದ ಹೆಮ್ಮರಗಳು ಆಕಾಶ ಪಟದಲ್ಲಿ ಬರೆದು ಕೆತ್ತಿ ಮೆತ್ತಿದ ಸಜೀವ ಚಿತ್ರಗಳಂತೆ ತೋರಿ, ವಿಶ್ವವರ್ಣಶಿಲ್ಪಿಯ ವರ್ಣನಾ ವೈಖರಿಯ ಕಲಾಕೌಶಲವನ್ನು ಸಾರುವ ಗೆಲ್ಲಂಬಗಳ ಮೇಲೆ ಹಾರಾಡುವ ಶ್ಯಾಮಲ ಕೇತನಗಳಂತೆ ಕಂಗೊಳಿಸುವವು. ಆ ದೃಶ್ಯ ದಿನದಿನಕ್ಕೂ ಹೊತ್ತು ಹೊತ್ತು ಹೊತ್ತಿಗೂ ಬೇರೆ ಬೇರೆ ಸೌಂದರ್ಯದಿಂದ ನಲಿಯುವುದು. ಅದು ಅನಂತ ಕವಿ ಅನಂತಾನಂತ ಕವನಗಳನ್ನು ವಿರಚಿಸುವ ಕಾವ್ಯರಂಗದಂತೆ ಮೆರೆಯುವುದು. ಮಳೆಗಾಲದಲ್ಲಿ ಒಂದು ದೃಶ್ಯ; ಚಳಿಗಾಲದಲ್ಲಿ ಮತ್ತೊಂದು ದೃಶ್ಯ; ಬೇಸಗೆಯಲ್ಲಿ ಇನ್ನೊಂದು ದೃಶ್ಯ. ಬೆಳಗಿನಲ್ಲಿ ಒಂದು ದೃಶ್ಯ; ಬೈಗಿನಲ್ಲಿ ಇನ್ನೊಂದು ದೃಶ್ಯ; ಹಗಲಿನಲ್ಲಿ ಮತ್ತೊಂದು ದೃಶ್ಯ. ಬೆಳ್ದಿಂಗಳಲ್ಲಿ ಬೇರೊಂದು ಚೆಲುವುದು; ಕದ್ದಿಂಗಳಲ್ಲಿ ಮಗದೊಂದು ನೋಟ.

## ಕುಪ್ಪಳಿ ಮನೆ (ನನ್ನ ಮನೆ)

ಮನೇ ಮನೇ ಮುದ್ದು ಮನೇ
ಮನೇ ಮನೇ ನನ್ನ ಮನೇ!

ತನ್ನ ತಾಯಿಯೊಲಿದ ಮನೆ,
ನನ್ನ ತಂದೆ ಬಳೆದ ಮನೆ;
ನನ್ನ ಗೆಳೆಯರೊಡನೆ ಕೂಡಿ,
ಮುದ್ದು ಮಾತುಗಳನು ಆಡಿ,
ಮಕ್ಕಳಾಟಗಳನು ಹೂಡಿ
ನಾನು ನಲಿದ ನನ್ನ ಮನೆ!

ನನ್ನ ಗಿರಿಜೆಯಿದ್ದ ಮನೆ,
ನನ್ನ ವಾಸುವಿದ್ದ ಮನೆ;
ಮನೆಯ ಮುತ್ತಿ ಬರಲು ಚಳಿ,
ಆಳು ಮಂಜ ಒಳೆಯ ಬಳಿ
ನಮ್ಮನೆಲ್ಲ ಕತೆಗಳಲಿ
ಕರಗಿಸಿದ್ದ ನನ್ನ ಮನೆ!

ತಾಯಿ ಮುತ್ತು ಕೊಟ್ಟ ಮನೆ,
ತಂದೆ ಎತ್ತಿಕೋಂಡ ಮನೆ;
ಮನೆಗೆ ಬಂದ ನಂಟರೆಲ್ಲ
ಕೂಗಿ ಕರೆದು ಕೊಬರಿ ಬೆಲ್ಲ
ಗಳನು ಕೊಟ್ಟು, ಸವಿಯ ಸೊಲ್ಲ
ನಾಡುತಿದ್ದ ನನ್ನ ಮನೆ!

ನಾನು ನುಡಿಯ ಕಲಿತ ಮನೆ,
ನಾನು ನಡಿಗೆಯರಿತ ಮನೆ;
ಹಕ್ಕಿ ಬಳಗ ಸುತ್ತ ಕೂಡಿ
ಬೈಗು ಬೆಳಗು ಹಾಡಿ ಹಾಡಿ
ಮಲೆಯನಾಡ ಸಗ್ಗ ಮಾಡಿ
ನಲಿಸುತ್ತಿದ್ದ ನನ್ನ ಮನೆ!

ನಾನು ಬಿದ್ದು ಎದ್ದ ಮನೆ,
ಮೊದಲು ಬೆಳಕು ಕಂಡ ಮನೆ;
ತಿಪ್ಪ ತಿಪ್ಪ ಹೆಜ್ಜೆಯಿಟ್ಟು,
ಬಿಸಿಲಕೋಲ ಹಿಡಿದು ಬಿಟ್ಟು,
ತಂಗಿ ತಮ್ಮರೊಡನೆ ಹಿಟ್ಟು
ತಿಂದು ಬೆಳೆದ ನನ್ನ ಮನೆ!

ಮೊದಲ ಮಿಂಚು ಹೊಳೆದ ಮನೆ,
ಮೊದಲ ಗುಡುಗು ಕೇಳ್ದ ಮನೆ;
ಮೊದಲ ಮಳೆಯ ಕರೆದು ಕರೆದು,
ಹೆಂಚಮೇಲೆ ಸದ್ದು ಹರಿದು,
ಮಾಡಿನಿಂದ ನೀರು ಸುರಿದು
ಬೆರಗನಿತ್ತ ನನ್ನ ಮನೆ!

ನನ್ನ ಐಗಳಿದ್ದ ಮನೆ,
ಮರಳು ತಿದ್ದಿ ಬರೆದ ಮನೆ;
ಋಷಿಯು ಕೊಟ್ಟ ಸಗ್ಗದಂತೆ,
ಬಂಧ ಕೊಟ್ಟ ಮುಕ್ತಿಯಂತೆ,
ದುಃಖ ಹೆತ್ತ ಸುಖಗಳಂತೆ
ತಿರೆಯ ಸಿರಿಯ ನನ್ನ ಮನೆ!

ಹೆತ್ತ ತಾಯಿ ಸತ್ತ ಮನೆ,
ಮತ್ತೆ ತಂದೆ ಹೋದ ಮನೆ;
ಗಿರಿಜೆ ನರಳಿ ಬಿಟ್ಟ ಮನೆ,
ಬಾಸು ಬೆಂದು ಸಂದ ಮನೆ,
ಬಾಲ್ಯ ಬಾಡಿ ಬಿದ್ದ ಮನೆ,
ಆದರೆನಗೆ ನನ್ನ ಮನೆ!

ಕಬ್ಬಗಳನು ಕಂಡ ಮನೆ,
ಹಬ್ಬದೂಟ ಉಂಡ ಮನೆ;
ಅಜ್ಜಿ ಅಜ್ಜರೆಲ್ಲರಿದ್ದು,
ಕೆಳದಿ ಕೆಳೆಯರೆಲ್ಲರಿದ್ದು
ಬಾಳಿ ಬದುಕಿ ನರಳಿ ಬಿದ್ದು
ಮಾಯವಾದ ನನ್ನ ಮನೆ!

ನಾನು ಬಾಳುತಿರುವ ಮನೆ,
ತಮ್ಮ ತಿಮ್ಮು ಇರುವ ಮನೆ;
ತಂಗಿ ಬಂದು ಹೋಗುತಿರುವ,
ಹಕ್ಕಿ ಬಳಗ ಹಾಡುತಿರುವ,
ಕಾಡು ಮುತ್ತು ಕೊಡುತಲಿರುವ
ಸೊಬಗುವೀಡು ನನ್ನ ಮನೆ!

ಹಳ್ಳಿರಂಗನಿರುವ ಮನೆ,
ಬಳ್ಳಿ ಸಿಂಗರಿಸುವ ಮನೆ;
ಬಾವಿಕಟ್ಟೆ ಬಳಿಯೊಳಂದು,
ತಾಯಿ ತಂದೆ ಬಳಗ ಮಿಂದು
ನಿಲಲು, ನೆಳಲ ನೀಡಿದೊಂದು
ತೆಂಗು ಇರುವ ನನ್ನ ಮನೆ!

ಹಿರಗ ಕೊಳಲ ನುಡಿದ ಮನೆ,
ಹಣ್ಣು ತಂದು ಕೊಟ್ಟ ಮನೆ;
ತುರುಗಳೆಲ್ಲ 'ಅಂಬ' ಎಂದು,
ಕರುಗಳನ್ನು ಕರೆದು ಬಂದು,
ಒಂದು ದಿನವು ಕಳೆಯಿತೆಂದು
ಎಚ್ಚರಿಸಿದ ನನ್ನ ಮನೆ!

ತಾಯಿ ಮಿಂದ ಕೆರೆಯ ಮನೆ,
ಬಟ್ಟೆಯೊಗೆದ ತೊರೆಯ ಮನೆ;
ತಾಯಿಯಡಿಯ ದೂಳಿಯಿಂದ,
ತಂದೆಯುತ್ತ ಮಣ್ಣಿನಿಂದ,
ಗಿರಿಜೆ ಬಿದ್ದ ಮಟ್ಟಿಯಿಂದ,
ಮಂಗಳಾದ ನನ್ನ ಮನೆ!

ನಾನು ಬದುಕೊಳುಳಿವ ಮನೆ,
ನಾನು ಬಾಳಿಯಳಿವ ಮನೆ;
ನನ್ನದಲ್ಲದಿಳೆಯೊಳಿಂದು,
ಹೆಮ್ಮೆಯಿಂದ ನನ್ನದೆಂದು,
ಬೆಂದು ಬಳಲಿದಾಗ ಬಂದು
ನೀರು ಕುಡಿವ ನನ್ನ ಮನೆ!

**-ಕುವೆಂಪು**